ಸವಿ ಸವಿ ನೆನಪು..

# ‘ಅಣ್ಣಾವ್ರ ದರ್ಶನ ಪಡೆದು ಪುನೀತನಾದೆ’

**ರಾಜ್‌ಕುಮಾರ್ ಅವರನ್ನು ನೋಡಬೇಕು ಎಂದು ಕೋಲಾರ ಜಿಲ್ಲೆ ಕೆ.ಜಿ.ಎಫ್‌ನಿಂದ ಸರ್ಕಾರಿ ಬಸ್ ಹತ್ತಿ ಅವರ ಮನೆಗೆ ಹೋದಾಗ ಅವರು ನನ್ನತ್ತ ನೋಡಿದ್ದೇ ತಡ ಸೀದಾ ಅವರ ಎರಡು ಕಾಲಿಗೆ ಬಿದ್ದು ಕಣ್ಣಿಗೊತ್ತಿಕೊಂಡೆ. ರಾಜಣ್ಣ ನನಗೆ ತೀರ ಪರಿಚಯದವರಂತೆ ಅವರ ಎರಡು ಕೈಗಳಿಂದ ನನ್ನನ್ನು ತಬ್ಬಿಕೊಂಡರು!**

**■ ಸಿ. ರವೀಂದ್ರ ಸಿಂಗ್ ಕೋಲಾರ**

ಅಣ್ಣಾವ್ರನ್ನು ಹೇಗಾದರೂ ಮಾಡಿ ಸಂದರ್ಶಿಸಿ ಅವರೊಡನೆ ಒಂದು ಫೋಟೊ ತೆಗೆಸಿಕೊಂಡರೆ ಅಷ್ಟೆ ಸಾಕು ನನ್ನಂಥ ಭಾಗ್ಯಶಾಲಿ ಮತ್ತೊಬ್ಬರಿಲ್ಲವೆಂದು ಅಂದುಕೊಂಡ ನನಗೆ ಆ ಅವಕಾಶ ಸಿಕ್ಕಿದ್ದು ನನ್ನ ಪುಣ್ಯ! ಈ ಸಂದರ್ಭದ ನೆನಪು ಮತ್ತೆ ಮತ್ತೆ ಕಾಡುತ್ತಿದೆ, ಮನಸ್ಸು ಹಗುರಾಗುತ್ತಿದೆ.

ಡಾ.ರಾಜ್‌ಕುಮಾರ್ ಇಂದು ನಮ್ಮೊಂದಿಗಿಲ್ಲ. ಆದರೆ ಅವರ ಬಗ್ಗೆ ಏನೇ ಲೇಖನ ಬಂದರೂ ಓದಿದಾಗ ಮೈಜುಂ ಎನಿಸುತ್ತದೆ. ಅಂಥ ಪುಣ್ಯಪುರುಷ ಅವರು. ಕನ್ನಡ ಚಿತ್ರರಂಗದ ಸಾರಸ್ವತ ಲೋಕವನ್ನು ಆಳಿದ, ಕನ್ನಡಿಗರ ಎದೆಯಲ್ಲಿ ಅಭಿಮಾನದ ಮುದ್ರೆಯನ್ನು ಒತ್ತಿದ ರಾಜ್ ಅವರ ಕಲಾವಂತಿಕೆ ಎಂದೆಂದಿಗೂ ಅಜರಾಮರ.

ಸಾಮಾಜಿಕವಾಗಲಿ, ಪೌರಾಣಿಕ ಪಾತ್ರಗಳಾಗಲಿ ಎಲ್ಲ ತರದ ಪಾತ್ರಗಳಲ್ಲೂ ಸೈ ಎನಿಸಿಕೊಂಡು ಅದಕ್ಕೆ  ನ್ಯಾಯ ಒದಗಿಸಿ ಕೊಟ್ಟ ಏಕೈಕ ಕನ್ನಡದ ಮೇರುನಟ ಡಾ.ರಾಜ್‌ಕುಮಾರ್. ಇಂತಹ ಅದ್ಭುತ ನಟರ ಜೊತೆ ಸುತ್ತಾಡಿದಂತೆ ಅವರೊಟ್ಟಿಗೆ ಕೂತು ಊಟ ಮಾಡಿದಂತೆ ಸಲುಗೆಯಿಂದ ಸಂಭಾಷಿಸುವಂತೆ ನಾನು ಆಗಾಗ್ಗೆ ಕನಸು ಕಾಣುತ್ತಿದ್ದೆ.

ನನ್ನ ಜೀವಮಾನದಲ್ಲಿ ಎಂದಾದರೊಮ್ಮೆ ಇವರನ್ನು ನೋಡಲೇಬೇಕು ಎಂದು ನಿರ್ಧರಿಸಿದೆ. ಹತ್ತು ವರ್ಷ ಹಿಂದೆ ಏಪ್ರಿಲ್ 24 ಅವರ ಹುಟ್ಟುಹಬ್ಬಕ್ಕೆ ಹೋಗಲು ತಯಾರಿ ನಡೆಸಿದೆ. ಸರ್ಕಾರಿ ಬಸ್ಸು ಹತ್ತಿ ಸದಾಶಿವನರದ ಅವರ ಬಂಗಲೆಗೆ ಹೋದೆ. ಅಲ್ಲಿ ಅಭಿಮಾನಿಗಳು ಕಿಕ್ಕಿರಿದು ಕಾಂಪೌಂಡ್ ಗೋಡೆ, ಮರ ಹತ್ತಿ ಅಣ್ಣಾವ್ರಿಗೆ ಜೈಕಾರ ಹಾಕುತ್ತಿದ್ದರು. ಇದರ ನಡುವೆ ಪೊಲೀಸ್ ಸಿಬ್ಬಂದಿಯ ಸರ್ಪಗಾವಲು. ಒಳಗೆ ಮುಕ್ತ ಪ್ರವೇಶಕ್ಕೆ ಅವಕಾಶವಿರಲಿಲ್ಲ. ನನಗೆ ದಿಕ್ಕು ಕಾಣದಾಯಿತು. ಅವರನ್ನು ಮಾತನಾಡಿಸದಿದ್ದರೂ ಸರಿ, ಕಡೆಗೆ ಅವರ ಕೈಯನ್ನಾದರೂ ಒಮ್ಮೆ ಸ್ಪರ್ಶಿಸಿ ಪಾವನವಾಗಬೇಕೆಂದು ಒಳ ಮನಸ್ಸಿನಲ್ಲಿ ಅಂದುಕೊಂಡು ಗೇಟಿನ ಬಳಿ ನಿಂತುಕೊಂಡೆ. ಸರಿಯಾದ ಸಮಯಕ್ಕೆ ಚಿತ್ರನಟರಾದ ಸುಂದರ್‌ರಾಜ್ ರಾಜಣ್ಣನವರಿಗೆ ಶುಭಾಶಯ ಕೋರಲು ಕೈಯಲ್ಲಿ ಬೊಕ್ಕೆ ಹಿಡಿದು ಬಂದರು. ಅವರ ಹಿಂದೆಯೇ ಪೊಲೀಸರ ಕಣ್ತಪ್ಪಿಸಿ ಮನೆ ಒಳಗೆ ಹೋದೆ. ಅಲ್ಲಿ ನನಗೆ ಮತ್ತೊಂದು ಆತಂಕ ಕಾದಿತ್ತು. ರಾಜಣ್ಣನವರ ಸುತ್ತ ಟಿ.ವಿ. ಚಾನೆಲ್ ನವರು ಮೈಕ್ ಹಿಡಿದು ಮುತ್ತಿಕೊಂಡಿದ್ದರು. ಹಿರಿಯ ಪೊಲೀಸ್ ಅಧಿಕಾರಿಗಳು ಅಲ್ಲೂ ಕಾವಲಿದ್ದದ್ದು ನೋಡಿ ಸೀದಾ ಅಣ್ಣಾವ್ರ ಮನೆಯ ಸೆಲ್ಲಾರ್‌ನ ಕಾರ್ ಪಾರ್ಕಿಂಗ್ ಬಳಿ ಬಂದೆ. ಅಲ್ಲೇ ಊಟದ ವ್ಯವಸ್ಥೆಯೂ ಇತ್ತು! ಅಣ್ಣಾವ್ರನ್ನು ಸರಿಯಾಗಿ ನೋಡಲಾಗಲಿಲ್ಲ. ಅವರ ಮನೆಯ ಊಟ ಮಾಡುವ ಭಾಗ್ಯವಾದರೂ ಸಿಕ್ಕಿತಲ್ಲ ಎಂದು ಊಟ ಮಾಡಿದೆ. ಅಷ್ಟರಲ್ಲಿ ಜನಸಂದಣಿ ಹೆಚ್ಚಾದ ಕಾರಣ ಎಲ್ಲರೂ ಆಚೆ ನಡೆದರು. ನಾನು ವಿಧಿ ಇಲ್ಲದೆ ಬಸ್ ಹತ್ತಿ ಮನೆಗೆ ವಾಪಸೇನೋ ಬಂದೆ. ಅವರ ಮನೆಗೆ ಹೋದರೂ ಅಣ್ಣಾವ್ರನ್ನು ನೋಡಲಾಗಲಿಲ್ಲ ಎಂದು ಅಂದು ರಾತ್ರಿ ಇಡೀ ನಿದ್ದೆಯೂ ಬಂದಿರಲಿಲ್ಲ.

ಇದಾದ ಕೆಲ ದಿನಗಳ ನಂತರ ನನ್ನ ಪ್ರಯತ್ನ ಮುಂದುವರೆಸಿದೆ. ಸಂಜೆ ಹೊತ್ತಲ್ಲಿ ರಾಜ್ ಅವರು ಮನೆಯಲ್ಲೇ ಇರುವ, ಯಾವುದೇ ಕಾರ್ಯಕ್ರಮಗಳು, ವಿಶೇಷ ದಿನಗಳು ಇಲ್ಲದ ದಿನದಲ್ಲಿ ಅವರನ್ನು ನೋಡುವುದೇ ಸರಿ ಎಂದು ಕ್ಯಾಲೆಂಡರಿನ ದಿನಗಳನ್ನು ಗಮನಿಸಿಟ್ಟುಕೊಂಡೆ. ಒಂದು ಕ್ಯಾಮೆರಾದ ಸಿದ್ಧತೆಯನ್ನು ಮಾಡಿಕೊಂಡು ನನ್ನ ಗೆಳೆಯ ಗಜೇಂದ್ರಸಿಂಗನನ್ನು ಜೊತೆ ಮಾಡಿಕೊಂಡು ಕೆ.ಜಿ.ಎಫ್.ನಲ್ಲಿ ಸಂಜೆ ಮೂರೂವರೆ ಗಂಟೆಗೆ ಸರ್ಕಾರಿ ಬಸ್ ಹತ್ತಿ ಕೂತೆ. ಆರು ಗಂಟೆಗೆ ಮೆಜೆಸ್ಟಿಕ್ ತಲುಪಿ ಅಲ್ಲಿಂದ ಆಟೋ ಹಿಡಿದು ದಾರಿ ಮಧ್ಯ 300 ರೂಪಾಯಿಗೆ ಬೊಕ್ಕೆಯನ್ನು ಖರೀದಿಸಿಕೊಂಡು ಅವರ ಗೇಟಿನ ಮುಂದೆ ಆಟೋ ಇಳಿದೆವು. ಅಷ್ಟೊತ್ತಿಗಾಗಲೇ ಸಂಜೆ 6.30 ಆಗಿ



ಕತ್ತಲೂ ಆವರಿಸಿ ವಿದ್ಯುತ್ ದೀಪಗಳು ಬೆಳಗುತ್ತಿದ್ದವು. ಅಲ್ಲಿ ಸೆಕ್ಯೂರಿಟಿ ಗಾರ್ಡ್ ಜೊತೆ ಇನ್ನಿಬ್ಬರು ಕಾವಲಿದ್ದರು. ಕೈಲಿ ಬೊಕ್ಕೆ ಹಿಡಿದಿದ್ದನ್ನು ನೋಡಿ ನಮ್ಮ ಬರುವಿಕೆಯ ಉದ್ದೇಶ ಅವರಿಗೆ ಅರಿವಾಗಿತ್ತು. ಸರಿ ಅಂಥ ಅವರಲ್ಲಿಗೆ ಹೋಗಿ ‘ಸಾರ್ ನಾವು ಅಣ್ಣಾವ್ರನ್ನು ನೋಡಬೇಕು’ ಅಂದೆ. ‘ನೋಡಿ ಇಷ್ಟೊತ್ತಲ್ಲಿ ಬರೋ ಹಾಗಿಲ್ಲ, ನಾಳೆ ಬನ್ನಿ’ ಅಂಥ ಸಾರಾಸಗಟಾಗಿ ಹೇಳಿಬಿಟ್ಟರು. ಇವತ್ತೇನೆ ಆಗಲಿ ಅಣ್ಣಾವ್ರನ್ನು ನೋಡದೆ ಈ ಜಾಗದಿಂದ ಕದಲ ಕೂಡದು ಎಂದು ನಿರ್ಧರಿಸಿ, ಅಲ್ಲೇ 10 ನಿಮಿಷ ಕಾದೆ! ಯಾವ ದೇವರು ಕಣ್ಣು ಬಿಟ್ಟನೋ ಗೊತ್ತಿಲ್ಲ. ರಾಜಣ್ಣ ಪುನೀತ್ ರಾಜ್‌ಕುಮಾರ್ ಜತೆಗೆ ವಾಕ್ ಮಾಡಲು ತಯಾರಾಗಿ ಶ್ವೇತ ವರ್ಣದ ಅಂಗಿ ಪಂಚೆಯಲ್ಲಿ ಹೊರಗೆ ಬಂದರು.

ಬೆಳದಿಂಗಳ ಹೊಳೆವ ಚಂದ್ರನಂತೆ ರಾಜ್‌ಕುಮಾರ್ ಅವರು ದರ್ಶನ ಕೊಟ್ಟಾಗ ನಾನು ನಾನಾಗಿರಲಿಲ್ಲ. ಮೂಕವಿಸ್ಮಿತನಾಗಿ ಕ್ಷಣ ಕಾಲ ನಿಂತುಬಿಟ್ಟೆ! ಗೇಟಿನ ಬಳಿ ಬಂದ ರಾಜಣ್ಣ ತಮ್ಮ ಪಾದರಕ್ಷೆಗಳನ್ನು ಪಕ್ಕಕ್ಕೆ ಬಿಟ್ಟು ಅಲ್ಲೇ ಗಣಪನ ಮೂರ್ತಿಗೆ ಎರಡು ನಿಮಿಷ ಕೈಜೋಡಿಸಿ ನಮಸ್ಕರಿಸಿದರು. ನಂತರ ನನ್ನತ್ತ ನೋಡಿದ್ದೇ ತಡ ಸೀದಾ ಅವರ ಎರಡು ಕಾಲಿಗೆ ಬಿದ್ದು ಕಣ್ಣಿಗೊತ್ತಿಕೊಂಡೆ. ರಾಜಣ್ಣ ನನಗೆ ತೀರಾ ಪರಿಚಯದವರಂತೆ ನನ್ನನ್ನು ಅವರ ಎರಡು ಕೈಗಳಿಂದ ತಬ್ಬಿಕೊಂಡರು. ನನ್ನ ಗೆಳೆಯ ಗಜೇಂದ್ರನ ಜೊತೆಗೂಡಿ ಹೂಗುಚ್ಛ ನೀಡಿ ‘ಅಣ್ಣಾ ನಿಮ್ಮನ್ನು ನೋಡಿದ್ದು ನನಗೆ ನಂಬಲಾಗುತ್ತಿಲ್ಲ’ ಎಂದು ಹೇಳುವಾಗ ಅವರ ಕೈಗಳು ನನ್ನನ್ನು ಬಿಡದೆ ಹಿಡಿದೇ ಇದ್ದವು.

‘ಅಣ್ಣ ನಿಮ್ಮ ಜೊತೆ ಫೋಟೊ ತೆಗೆಸಿಕೊಳ್ಳಬಹುದಾ?’ ಎಂದೆ. ಆಗ ಅವರು ‘ಯಾಕಾಗಬಾರದು? ಬನ್ನಿ ನಿಂತುಕೊಳ್ಳಿ’ ಎಂದು ಹೇಳಿದರು. ಅವರ ಹತ್ತಿರ ನಿಲ್ಲಿಸಿಕೊಂಡು ಫೋಟೊ ತೆಗೆಸಿಕೊಂಡ ಬಳಿಕ ನಮ್ಮನ್ನು ಕಳುಹಿಸಿ ಅವರು ವಾಕಿಂಗ್ ಹೊರಟರು. ಆ ರೋಮಾಂಚನ ಕ್ಷಣ ನೆನೆಸಿಕೊಂಡಾಗೆಲ್ಲಾ ನನಗೆ ಮೈ ಜುಂ ಎನ್ನುವುದು. ಇದು ಸತ್ಯ ಘಟನೆಯೇ, ಅಥವಾ ಕನಸೇ ಎಂಬುದನ್ನು ನಾನೇ ಕೆಲವೊಮ್ಮೆ ಪ್ರಶ್ನಿಸಿಕೊಳ್ಳುತ್ತೇನೆ.

ಇಂತಹ ಅಪ್ರತಿಮ ಕಲಾ ಸಾಧಕರಾದ ಅಣ್ಣಾವ್ರ ನೋಡಿ ಮಾತನಾಡಿಸಿ ಅವರೊಟ್ಟಿಗೆ ಫೋಟೊವನ್ನೂ ತೆಗೆಸಿಕೊಂಡಿದ್ದು ನಿಜಕ್ಕೂ ಅವಿಸ್ಮರಣೀಯ. ■